ಓ ಎಸ್ ನಂ. 223/2022

ಪಿ ಡಬ್ಲು 1

ದಿನಾಂಕ 15-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಬಿ ಟಿ ಕೆ ವಕೀಲರಿಂದಃ

ಪ್ರತಿವಾದಿಗಳು ನನಗೆ 2018 ರಿಂದಲೂ ಪರಿಚಯ ಇರುತ್ತಾರೆ. ನಾನು ಛಾಯಾಚಿತ್ರಗ್ರಾಹಕನಾಗಿರುತ್ತೇನೆ. ನಾನು ಹಣಕಾಸಿನ ವ್ಯವಹಾರವನ್ನು ಸಹ ಮಾಡುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರದ ವ್ಯವಹಾರಕ್ಕೆ ಯಾರೆಲ್ಲಾ ಸೇರಿಕೊಂಡಿದ್ದರು ಹಾಗೂ ಸದರಿ ವ್ಯವಹಾರ ಎಲ್ಲಿ ಆಯಿತು ಎಂದರೆ ಸಾಕ್ಷಿ ಸದರಿ ಒಪ್ಪಂದದಲ್ಲಿರುವಂತಹ ಜಮೀನಿನ ಬಳಿ ವ್ಯವಹಾರ ಆಗಿದ್ದು, ಆ ವ್ಯವಹಾರದ ಸಮಯದಲ್ಲಿ ಚೆಲುವರಾಜು ಶ್ರೀನಿವಾಸ್ ಮತ್ತು ಕುಮಾರ್ ಹಾಗೂ ನಾನು ಇದ್ದೇವು ಎಂದು ನುಡಿದಿರುತ್ತಾರೆ. ಅದು ಯಾವ ದಿನ ಅಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ, ೨೦೧೮ ರಲ್ಲಿ ಎಂದು ನುಡಿಯುತ್ತಾರೆ. ೧ ನೇ ಪ್ರತಿವಾದಿ ಇದಕ್ಕಿಂತ ಪೂರ್ವದಲ್ಲಿ ನನ್ನ ಬಳಿ ಹಣವನ್ನು ಪಡೆದುಕೊಳ್ಳುವುದು ಕೊಡುವುದು ಮಾಡುತ್ತಿದ್ದರ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ೧ ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲದೆ ಇತರೆ ಸ್ವತ್ತುಗಳು ಇರುವ ಬಗ್ಗೆ ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ೧ ನೇ ಪ್ರತಿವಾದಿ ನನಗೆ ಜಮೀನು ಕೊಡುವ ಅಗತ್ಯತೆ ಇರಲಿಲ್ಲ ಅವರು ಹಣದ ಭದ್ರತೆಗಾಗಿ ದಾಖಲೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ೨೦೧೮ ರಲ್ಲಿ ೧ ನೇ

ಪ್ರತಿವಾದಿ ನನ್ನಿಂದ ಪಡೆದಂತಹ ಸಾಲದ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಪಾವತಿ ಮಾಡಿ ಸಾಲವನ್ನು ಸಂಪೂರ್ಣ ತೀರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ-1 ರ ದಾಖಲೆಯ ಆಧಾರದಲ್ಲಿ ಕ್ರಯಪತ್ರ ಬರೆದುಕೊಡುವಂತೆ ಪ್ರತಿವಾದಿಯನ್ನು ಯಾವಾಗ ಕೇಳಿರುತ್ತೇನೆ ಎಂದರೆ ಸಾಕ್ಷಿ ಒಪ್ಪಂದವಾದ 3 ತಿಂಗಳಾದ ಮೇಲೆ ನಾನು ನಿರಂತರವಾಗಿ ಕೇಳುತ್ತ ಬಂದಿರುತ್ತೇನೆ, ಆದರೆ ಪ್ರತಿವಾದಿ ರೆವಿನ್ಯೂ ಸ್ಕೆಚ್ ಮಾಡಿಸಬೇಕೆಂದು ಮುಂದೂಡುತ್ತ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಮೂರು ವರ್ಷದ ಒಳಗೆ 1 ನೇ ಪ್ರತಿವಾದಿಯ ಬಳಿ ಕ್ರಯಪತ್ರ ಮಾಡಿಕೊಡುವಂತೆ ಕೇಳಿರುವುದಿಲ್ಲ ಎಂದರೆ ಸಾಕ್ಷಿ ನಾನು 1 ನೇ ಪ್ರತಿವಾದಿ ಬಳಿ ಅವರ ಮನೆಗೆ ಹೋಗಿ ಕ್ರಯಪತ್ರವನ್ನು ಮಾಡಿಕೊಡುವಂತೆ ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಹಣದ ಭದ್ರತೆಗಾಗಿ ದಾಖಲೆಯನ್ನು ಬರೆಸಿಕೊಂಡಿರುವುದರಿಂದಲೇ ಕ್ರಯಪತ್ರವನ್ನು ಮಾಡಿಕೊಡುವಂತೆ 1 ನೇ ಪ್ರತಿವಾದಿಗೆ ಬಳಿ ಕೇಳಿರುವುದಿಲ್ಲಎಂದರೆ ಸಾಕ್ಷಿ ನಾನು ಜಮೀನಿನ ಬಗ್ಗೆ ಕ್ರಯಪತ್ರ ಬರೆದುಕೊಡಲು ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ.

3. ನಾನು ಬೀರೂರಿನ ಕರ್ನಾಟಕ ಬ್ಯಾಂಕ್ ಶಾಖೆಯಲ್ಲಿ ಖಾತೆ ಹೊಂದಿರುತ್ತೇನೆ ಎಂದರೆ ಸರಿ. ಸದರಿ ಖಾತೆಯ ಸಂಖ್ಯೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ನನಗೆ ಕೊಡಬೇಕಾಗಿದ್ದ ಹಣವನ್ನು ಮೇಲ್ಕಂಡ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣ ಮರುಪಾವತಿ ಮಾಡಿದ್ದರೂ ಸಹ ದುರುದ್ದೇಶಪೂರ್ವಕವಾಗಿ ಮತ್ತು

1 ನೇ ಪ್ರತಿವಾದಿಯಿಂದ ಹೆಚ್ಚುವರಿ ಹಣ ಪಡೆಯಲು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಕೊಡಬೇಕಾದ ಸಂಪೂರ್ಣ 7 ಲಕ್ಷ ರೂಗಳನ್ನು ಸಹ ನನ್ನ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೇಲ್ಕಂಡ ನನ್ನ ಬ್ಯಾಂಕ್ ಖಾತೆ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ಬ್ಯಾಂಕ್ ಖಾತೆಯ ಅಕೌಂಟ್ ಎಕ್ಸ್‌ಟ್ರಾಕ್ಟನ್ನು ಪಡೆದು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. 1 ನೇ ಪ್ರತಿವಾದಿ ನನ್ನ ಖಾತೆಗೆ ಜಮೆ ಮಾಡಿದ್ದ 7 ಲಕ್ಷ ರೂಗಳನ್ನು ನಾನು ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸಾಕ್ಷಿ ಸದರಿ ಕರ್ನಾಟಕ ಬ್ಯಾಂಕಿನಲ್ಲಿ ನನ್ನ ಮತ್ತು ಚೆಲುವರಾಜುರವರ ಹೆಸರಿನಲ್ಲಿ ಜಂಟಿ ಖಾತೆ ಇದ್ದು, ಸದರಿ ಜಮಾ ಆಗಿರುವ ಹಣಕ್ಕೂ ನನಗೂ ಸಂಬಂದ ಇಲ್ಲ, ಅದು ಚೆಲುವರಾಜುರವರಿಗೆ ಸಂಬಂಧಿಸಿದ ವ್ಯವಹಾರ ಎಂದು ನುಡಿದಿರುತ್ತಾರೆ. ಮೇಲ್ಕಂಡಂತೆ ಹಣವನ್ನು ಯಾವಾಗ ವಿತ್ ಡ್ರಾ ಮಾಡಿರುತ್ತೇನೆ ಎಂದು ಹೇಳಲು ಸಾದ್ಯವೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

4. ಪ್ರತಿವಾದಿಗಳ ಕುಟುಂಬದಲ್ಲಿ ನಾಲ್ಕು ಜನ ಇದ್ದಾರೆ. ಅವರಿಗೆ ಸಾಕಷ್ಟು ಆದಾಯ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ತನ್ನ ಜಮೀನಿನ ಅಭಿವೃದ್ಧಿಗಾಗಿ ನನ್ನ ಬಳಿ ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಪಡೆದ ಸಾಲವನ್ನು ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಚೆಲುವರಾಜುರವರು ನನಗೆ ಸ್ನೇಹಿತರಾಗಬೇಕು. ಅವರು ಬೇರೂರಿನಲ್ಲಿದ್ದಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು **ಮತ್ತು**

**ಪ್ರದನ್ಯಾದಂ., ಕಡೂರು.**